

# ಅಪ್‌ಡೇಟ್ ಆಗುವುದು ಹಿರಿಯರ ಜವಾಬ್ದಾರಿ

■ ಸ್ವಯಂಪ್ರಭಾ

ಮಕ್ಕಳ ಮೊಬೈಲ್ ಬಳಕೆ ಮತ್ತು ತಿಳಿವಳಿಕೆಯ ಬಗ್ಗೆ ಬಹಳಷ್ಟು ಪೋಷಕರು ಪುಳಕಿತರಾಗುತ್ತಾರೆ. 'ಐದನೇ ಕ್ಲಾಸಿನ ಮಗ ಇಡೀ ದಿನ ಮೊಬೈಲ್‌ನಲ್ಲಿಯೇ ಮುಳುಗಿರುತ್ತಾನೆ' ಎಂದು ಪೋಷಕರು ಒಂದು ಹೊತ್ತಿನಲ್ಲಿ ಬೈದುಕೊಂಡರೂ, ಆ ಮೊಬೈಲ್‌ನಲ್ಲಿ ತಮಗೆ ಗೊತ್ತಿಲ್ಲದ ಎಷ್ಟೋ ವಿಚಾರಗಳನ್ನು ಅವನು ನಿರ್ವಹಿಸುತ್ತಾನೆ ಎಂಬ ಹೆಮ್ಮೆ ಅವರ ಮನದಾಳದಲ್ಲಿ ಇದ್ದೇ ಇರುತ್ತದೆ.

ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಹೆಚ್ಚು ವಿಚಾರಗಳನ್ನು ಮಕ್ಕಳು ಕಲಿತಿರುತ್ತಾರೆ ನಿಜ. ಆದರೆ ಅದು ಅವರ ಬೌದ್ಧಿಕತೆಯ ಪ್ರತೀಕವಾಗಿ ಇರಬೇಕಾಗಿಲ್ಲ. 'ನನ್ನ ಮಗಳು ಭಾರೀ ಜಾಣೆ' ಎನ್ನುವುದಕ್ಕೆ ಇದು ಮಾನದಂಡವಾಗಬೇಕಾಗಿಲ್ಲ. ಅಂತಹ ಹೊಗಳಿಕೆಯು ಅವರ ಜೀವನಕೇಂದ್ರವನ್ನು ಮೊಬೈಲ್‌ಗೆ ಅಥವಾ ತಂತ್ರಜ್ಞಾನಕ್ಕೆ ಸೀಮಿತಗೊಳಿಸಬಹುದು.

ವಿದ್ಯುತ್, ನೀರಿನ ಶುಲ್ಕಗಳನ್ನು ತುಂಬುವುದು, ಆನ್‌ಲೈನ್‌ನಲ್ಲಿಯೇ ಸಾಮಾನು ಖರೀದಿಸುವುದು, ನೆಟ್‌ಫ್ಲಿಕ್ಸ್‌ನಲ್ಲಿರುವ ಸಿನಿಮಾಗಳ ಮಾಹಿತಿ – ಹೀಗೆ ತಂತ್ರಜ್ಞಾನ ಆಧರಿಸಿದ ಅನೇಕ ವಿಚಾರಗಳ ಬಗ್ಗೆ ಪೋಷಕರು ಅಗತ್ಯಕ್ಕಿಂತ ಹೆಚ್ಚು ತಿಳಿದುಕೊಳ್ಳಲು ಹೋಗುವುದಿಲ್ಲ. ಅನಿವಾರ್ಯವಿದ್ದಾಗ ಮಾತ್ರ, ಎಷ್ಟು ಅಗತ್ಯವೋ ಅಷ್ಟು ತಂತ್ರಜ್ಞಾನವನ್ನು ಕಲಿತು ಸುಮ್ಮನಾಗುತ್ತಾರೆ. ಮನೆಯಲ್ಲಿ ಇವುಗಳನ್ನೆಲ್ಲ ನಿರ್ವಹಿಸುವ ಮಕ್ಕಳಿದ್ದರೆ ಮುಗಿಯಿತು, ಎಲ್ಲವನ್ನೂ ಅವರ ಕೈಗೆ ಹಸ್ತಾಂತರಿಸಿ, ಕೆಲಸ ಮಾಡಿಸಿಕೊಳ್ಳುತ್ತಾರೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಉಗಮವಾಗುವ ಹೊಸ ಹೊಸ ವಿಷಯಗಳನ್ನು ಪೋಷಕರು ತಿಳಿದುಕೊಳ್ಳಲೇಬೇಕು. ಪುಟ್ಟ ಮಕ್ಕಳೇನೋ ಬಳಿಯಲ್ಲಿಯೇ ಇರುತ್ತಾರೆ. ಆದರೆ ಕಾಲ ಹೀಗೆಯೇ ನಿಂತುಬಿಡುವುದಿಲ್ಲವಲ್ಲ. ಓದು ಉದ್ಯೋಗ ಎನ್ನುತ್ತ ಮಕ್ಕಳು ತಮ್ಮ ಕ್ಷೇತ್ರಗಳನ್ನು ಅರಸಿ ಹೊರಟಾಗ, ತಂತ್ರಜ್ಞಾನ ಮತ್ತು ಪೋಷಕರ ನಡುವೆ ಅಗಾಧವಾದ ಅಂತರ ಉಳಿಯಬಹುದು.

**ಮೊಬೈಲ್‌ಗೆ ಸಂಬಂಧಿಸಿದ ಎಲ್ಲ ಅಪ್‌ಡೇಟ್‌ಗಳನ್ನೂ ಮಕ್ಕಳಿಂದಲೇ ಮಾಡಿಸುತ್ತಿದ್ದೀರಿ ಎಂದರೆ, ವೇಗವಾಗಿ ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ನೀವು ಅಪ್‌ಡೇಟ್ ಆಗಲು ನಿರಾಕರಿಸುತ್ತಿದ್ದೀರಿ ಎಂದರ್ಥ.**

ಅದಷ್ಟೇ ಅಲ್ಲ, ಹೊಸ ವಿಷಯಗಳನ್ನು ಕಲಿಯುವ, ಕನಿಷ್ಠ ಅವುಗಳ ಮಾಹಿತಿಯನ್ನು ತಿಳಿದುಕೊಳ್ಳುವ, ತಂತ್ರಜ್ಞಾನ ಆಧಾರಿತ ಜೀವನಶೈಲಿಗೆ ಹೊಂದಿಕೊಳ್ಳುವುದನ್ನು ಪೋಷಕರು ನಿರಾಕರಿಸಲೇಬಾರದು.

ಮಕ್ಕಳು ಮೊಬೈಲ್ ನಿರ್ವಹಣೆಯಲ್ಲಿ ಬುದ್ಧಿವಂತರಾಗಿದ್ದಾರೆ ಎಂದು ಹೊಗಳುತ್ತ, ಅವರ ಬಳಿಯೇ ಎಲ್ಲಾ ಅಪ್‌ಡೇಟ್‌ಗಳನ್ನೂ ಮಾಡಿಸುತ್ತ ಇದ್ದೀರಿ ಎಂದರೆ, ವೇಗವಾಗಿ ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ನೀವು ಅಪ್‌ಡೇಟ್ ಆಗಲು ನಿರಾಕರಿಸುತ್ತಿದ್ದೀರಿ.

ತಂತ್ರಜ್ಞಾನ ಕ್ಷೇತ್ರಕ್ಕೆ ಇರುವ ಇನ್ನೊಂದು ಹೆಸರೇ ವೇಗ. ಸರ್ಕಾರಿ ಸೇವೆಗಳು, ಬ್ಯಾಂಕ್ ವ್ಯವಹಾರಗಳು, ದೈನಂದಿನ ವಹಿವಾಟುಗಳು ಈ ತಂತ್ರಜ್ಞಾನವೆಂಬ ಚಕ್ರದ ಮೇಲೆಯೇ ಓಡುತ್ತಿರುವಾಗ, ಅದರೊಂದಿಗೆ ನಾವೂ ಸಾಗುವುದು ಅನಿವಾರ್ಯ. ಆದ್ದರಿಂದ ಮೊಬೈಲ್ ಅಪ್‌ಡೇಟ್ ಆಗಬೇಕಾದರೆ, ಆನ್‌ಲೈನ್‌ನಲ್ಲಿ ವಸ್ತುಗಳನ್ನು ಬುಕ್ ಮಾಡಬೇಕಾದರೆ, ಮಕ್ಕಳ ಮಾರ್ಗದರ್ಶನವಷ್ಟೇ ಇರಲಿ. ಅಪ್‌ಡೇಟ್ ಮಾಡುವ ಕೆಲಸಗಳನ್ನು ನೀವೇ ಮಾಡಿರಿ. ಹೊಸ ವಿಚಾರಗಳೇನು ಎಂಬುದನ್ನು ಕೇಳಿ ತಿಳಿಯಿರಿ. 'ಅರೆ! ಅಮ್ಮಂಗೂ ಈ ವಿಚಾರಗಳೆಲ್ಲ ಇಷ್ಟವಾಗುತ್ತಿವೆಯಲ್ಲ' ಎನ್ನುತ್ತ ಮಗ ಇನ್ನಷ್ಟು ಆಪ್ತವಾಗುವುದು ಗ್ಯಾರೆಂಟಿ. ಈ ವಿಚಾರದಲ್ಲಿ ಪೋಷಕರು ಮಕ್ಕಳ ಉತ್ತಮ ವಿದ್ಯಾರ್ಥಿಗಳಾಗಬೇಕೇ ವಿನಾ ಅವಲಂಬಿತರಾಗುವುದಲ್ಲ.

ಪ್ರಸ್ತುತ ನಮ್ಮ ದೇಶದಲ್ಲಿ ಯುವಜನತೆಯ ಸಂಖ್ಯೆ ಹೆಚ್ಚು ಇದೆ ಎಂಬ ಸಂಭ್ರಮದ ಮಾತುಗಳನ್ನು ಓದಿರಬಹುದು, ಕೇಳಿರಬಹುದು. ಹೌದು, ನಮ್ಮ ದೇಶದಲ್ಲಿ ದುಡಿಮೆ ಮಾಡಬಲ್ಲ ಯುವಜನರ ಪ್ರಮಾಣ ಪ್ರಸ್ತುತ ಹೆಚ್ಚಿದೆ. ಅದು ಸದ್ಯಕ್ಕೆ ಸಂಭ್ರಮದ ವಿಷಯವಾದರೂ, ಇನ್ನು ಇಪ್ಪತ್ತು ವರ್ಷಗಳ ಬಳಿಕ, ನಮ್ಮ ದೇಶದ ಸ್ಥಿತಿ ಹೇಗಿರಬಹುದು ಎಂಬ ದೂರದೃಷ್ಟಿಯನ್ನೂ ನಾವು ಹೊಂದಿರಬೇಕಲ್ಲವೆ? ಸಾಮಾನ್ಯವಾಗಿ ಮನೆಗೊಂದೇ ಮಗು ಎನ್ನುವ ಪರಿಕಲ್ಪನೆ ಇರುವ ಈ ಸಂದರ್ಭದಲ್ಲಿ ನಿಂತು ಯೋಚಿಸುವಾಗ, 20 ವರ್ಷಗಳ ಬಳಿಕ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಲಿದೆ ಎಂಬುದು ವಾಸ್ತವ. ಅಂದರೆ ದಂಪತಿಗಳಿಬ್ಬರ ಹೆಗಲ ಮೇಲೆ ನಾಲ್ವರು ಹಿರಿಯ ನಾಗರಿಕರ ಜವಾಬ್ದಾರಿಯು ಇರುತ್ತದೆ ಎಂದಾಯಿತು. ಹಾಗಾದರೆ ತಮ್ಮ ಮಕ್ಕಳ ಮೇಲೆ ವಿಪರೀತ ಹೊರೆಹಾಕದೆ ಬದುಕು ನಿರ್ವಹಿಸುವ ಜವಾಬ್ದಾರಿಯು ಈಗಿನ ಪೋಷಕರ ಮೇಲಿದೆ. ಅಂತಹ ಸಂದರ್ಭಗಳಲ್ಲಿ ತಂತ್ರಜ್ಞಾನ ಬಹಳಷ್ಟು ಸಹಕಾರಿ ಆಗುತ್ತದೆ. ಆದ್ದರಿಂದ ಪ್ರಸ್ತುತ ತಂತ್ರಜ್ಞಾನವನ್ನು ಆಶ್ರಯಿಸುವುದು, ಸಾಧ್ಯವಾದಷ್ಟು ಅಪ್‌ಡೇಟ್ ಆಗಿರುವುದನ್ನು ಈಗಿನಿಂದಲೇ ರೂಢಿಸಿಕೊಳ್ಳಬೇಕು.

ಪೇರೆಂಟಿಂಗ್ ಅಂದರೆ ದೂರದೃಷ್ಟಿ ಅಲ್ಲದೆ ಮತ್ತೇನೂ ಅಲ್ಲ. ನಾಳಿನ ಸಮಾಜದಲ್ಲಿ ಬಾಳುವೆ ಮಾಡಲು, ತಕ್ಕಂತೆ ಮಕ್ಕಳನ್ನು ತಯಾರು ಮಾಡುವುದು ಒಂದು ಜವಾಬ್ದಾರಿಯಾದರೆ, ಮಕ್ಕಳ ದೃಷ್ಟಿಕೋನದಿಂದ ನೋಡಿದರೆ ವೇಗವಾಗಿ ಬದಲಾಗುತ್ತಲೇ ಇರುವ ನಾಳಿನ ಸಮಾಜಕ್ಕೆ ತಕ್ಕಂತೆ ನಾವೂ ಹೊಂದಿಕೊಳ್ಳುವುದು ಪೋಷಕರ ಇನ್ನೊಂದು ಜವಾಬ್ದಾರಿ.

ಪ್ರತಿಕ್ರಿಯಿಸಿ: feedback@sudha.co.in